

ಇಂಡಿಗೊ ಬಣ್ಣದ ಪಿಟ್ ಮುಂದೆ ರೋಶನ್ ದೇರಾವಾಲ

ರಾಸಾಯನಿಕಗಳು ಆರೋಗ್ಯಕ್ಕೆ ಶತ್ರುವೇ.

ಫ್ಯಾಬ್ ಇಂಡಿಯಾ ತನ್ನ ಬಟ್ಟೆಗಳಲ್ಲಿ ನೈಸರ್ಗಿಕ ಬಣ್ಣಗಳನ್ನೇ ಬಳಸುತ್ತಿದೆ. ರಾಜಸ್ತಾನದ ರಾಜಧಾನಿ ಜೈಪುರದ ಹೊರವಲಯದ ಹಳ್ಳಿ ಬಗ್ರು ಎಂಬಲ್ಲಿ ಈ ನೈಸರ್ಗಿಕ ಬಣ್ಣಗಳನ್ನು ತಯಾರಿಸುವ ಎರಡು ಕುಟುಂಬಗಳಿವೆ. ಇದರಲ್ಲಿ ಒಂದು ರಾಮ್‌ಕಿಶೋರ್ ಛಿಪ್ಪ ದೇರಾವಾಲ ಅವರ ಕುಟುಂಬ. ತರಕಾರಿಗಳ ಕಲರ್ ಪ್ರಿಂಟಿಂಗ್ ಮತ್ತು ಡೈ ಮಾಡುವುದರಲ್ಲಿ ಇವರದ್ದು ಎತ್ತಿದ ಕೈ. ಗ್ರಾಮೀಣ ಕರುಕುಶಲ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಭಾರತ ಸರ್ಕಾರದ 'ಪದ್ಮಶ್ರೀ' ಪ್ರಶಸ್ತಿಯನ್ನೂ ಪಡೆದಿರುವ ಆರ್.ಕೆ.ದೇರಾವಾಲ, ಬಗ್ರುವಿನಲ್ಲಿ ತಮ್ಮ ಘಟಕದಲ್ಲಿ ಸುಮಾರು 45ಕ್ಕೂ ಹೆಚ್ಚು ಕಾರ್ಮಿಕರಿಗೆ ಕೆಲಸ ಕೊಟ್ಟಿದ್ದಾರೆ. ಇವರ ಘಟಕದಿಂದ ಫ್ಯಾಬ್ ಇಂಡಿಯಾಗೆ ಪ್ರತಿ ಸೀಸನ್‌ನಲ್ಲಿ ಸುಮಾರು 45 ಸಾವಿರ ಮೀಟರ್‌ಗಳಷ್ಟು ಬಟ್ಟೆ ಸರಬರಾಜು ಆಗುತ್ತಿದೆ.

ಬಟ್ಟೆಗೆ ಬೇಕಾದ ಬಣ್ಣಗಳನ್ನು ತಯಾರಿಸುವುದು ಒಂದು ವಿಶಿಷ್ಟ ಕೌಶಲ. ಸ್ಥಳೀಯ ಕಪ್ಪು ಮಣ್ಣು, ದಾಳಿಂಬೆ ಸಿಪ್ಪೆ, ದಾವಡೇ ಕ ಫೂಲ್ (ಇದರಿಂದ ಬಂಗಾರದ ಬಣ್ಣ ಮೆರುಗು ಪಡೆದುಕೊಳ್ಳುತ್ತದೆ), ಸುಣ್ಣ, ಹಳದಿ, ಕಚ್ಚಾ ಕಬ್ಬಿಣದ ತುಂಡುಗಳು, ರಕ್ತ ಚಂದನ– ಹೀಗೆ ಬಣ್ಣಗಳನ್ನು ರೂಪಿಸಲು ಬೇಕಾದ ಕಚ್ಚಾ ವಸ್ತುಗಳು ಸ್ಥಳೀಯವಾಗಿಯೇ ಸಿಗುತ್ತವೆ. ಇದಕ್ಕೆ ಬೇಕಾದ ನೈಸರ್ಗಿಕ ಗೋಂದನ್ನು ಮಧ್ಯಪ್ರದೇಶದ ಕಾಡುಗಳಿಂದ ತರಿಸಲಾಗುತ್ತದೆ. ಮೊದಲ ಹಂತದಲ್ಲಿ ಕಪ್ಪು ಬಣ್ಣ, ಬೆಲ್ಲ ಮತ್ತು ನೀರಿನ ಮಿಶ್ರಣವನ್ನು 15 ದಿನಗಳ ಕಾಲ ನೆನೆಸಿಡಬೇಕಾಗುತ್ತದೆ. ಕಪ್ಪು ಬಣ್ಣವಾದ ಬಳಿಕ ಕೆಂಪು ಬಣ್ಣ, ಆ ಬಳಿಕ ಹೊನ್ನ ಬಣ್ಣ– ಹೀಗೆ ಒಂದೊಂದು ಬಣ್ಣಕ್ಕೂ ವಿವಿಧ ರೀತಿಯ ಸಂಸ್ಕರಣಾ ವಿಧಾನಗಳಿವೆ. ಕೆಲವು ವನಸ್ಪತಿಗಳನ್ನು ಗ್ರೈಂಡ್ ಮಾಡಿ ಬಳಿಕ ಮಿಶ್ರಣಗಳನ್ನು ಮಾಡಿ ಒಣಗಿಸಲಾಗುತ್ತದೆ. ಸ್ಥಳೀಯ ಕುಶಲಕರ್ಮಿಗಳ ಸ್ಪರ್ಶ ಈ ಬಟ್ಟೆಯ ಮೇಲೆ ವಿಶೇಷ ಛಾಪನ್ನು

